ಮಾಚೇನಹಳ್ಳಿಯೋ... ಪಾಚೇನಹಳ್ಳಿಯೋ... ಅಲ್ಲಿ ಹೂ ಮಾರಿಕೊಂಡಿದ್ದಾಳಂತೆ...' ಎಂದ ಆ ಸಣಕಲು ಆಸಾಮಿ.

'ಮತ್ತೇ... ಮೇಷ್ಟ್ರ ಮನೆ ಜಮೀನು?' ಮತ್ತೆ ನನ್ನ ವಿಚಾರಣೆ.

'ಆಂಜನೇಯಪ್ಪ ಮೇಷ್ಟ್ರ ತಮ್ಮ ಶರಣಪ್ಪ ಅಂತ... ಮನೆ ಜಮೀನು ಎಲ್ಲಾ ಮಾರಿ ಊರು ಬಿಟ್ಟು ನಾಲ್ಕೈದು ವರ್ಷಗಳೇ ಆದವು. ನಮ್ಮ ಈ ಹೋಟೆಲ್‌ನ ಸಾಹುಕಾರರೇ ಆ ಜಮೀನು ಮನೆ ಎಲ್ಲಾ ಕೊಂಡುಕೊಂಡಿದ್ದಾರೆ' ಎಂದ ಆತ, 'ಏನು... ಆ ಮೇಷ್ಟ್ರ ಸಂಬಂಧಿಗಳೋ ನೀವು?' ಎಂದು ಈಗ ನನ್ನ ವಿಚಾರಣೆ ಆರಂಭಿಸಿದ. 'ಅಲ್ಲ, ಸಂಬಂಧಿ ಏನಲ್ಲ...' ಎಂದ ನಾನು ಮತ್ತೆ ಮಾತಿಗೆ ನಿಲ್ಲದೆ ಅಲ್ಲಿಂದ ಹೊರಟೆ. ರಸ್ತೆಗಿಳಿದೆ. ಮುಂದೇನು ಮಾಡುವುದು ಎಂದು ಕ್ಷಣಕಾಲ ಯೋಚಿಸುತ್ತಾ ನಿಂತೆ.

ಮತ್ತೆ ಆ ಆಂಜನೇಯಪ್ಪ ಮೇಷ್ಟ್ರ ಮನೆಗೆ ಹೋಗುವುದರಿಂದ ಯಾವುದೇ ಪ್ರಯೋಜನವೂ ಇಲ್ಲ. ಅವರೂ ಇಲ್ಲ; ಮನೆಯೂ ಅವರದಾಗಿ ಉಳಿದಿಲ್ಲ. ಅವರ ಕುಟುಂಬದವರ್‍ಯಾರೂ ಈ ತ್ಯಾಮಗೊಂಡ್ಲುವಿನಲ್ಲಿಲ್ಲ. ಮತ್ತೆ ಆ ಮನೆಗೆ ಹೋಗಿ ಮಾಡುವುದಾದರೂ ಏನು ಎನ್ನಿಸಿತು. ಮರುಕ್ಷಣ... ಹೇಗೂ ಬಂದಾಗಿದೆ... ಆ ವಾಸವಿ ಕನ್ನಿಕಾ ದೇವಿಯ ದರ್ಶನವನ್ನಾದರೂ ಪಡೆದು ಹೋಗೋಣ ಎಂದುಕೊಂಡು ಆ ನರಪೇತಲ ಹೇಳಿದತ್ತ ಹೆಜ್ಜೆ ಹಾಕಿದೆ.

ಭವ್ಯವಾದ ದೇವಾಲಯ. ದೂರದಿಂದಲೇ ದೇವಸ್ಥಾನದ ಗೋಪುರ ಕಣ್ಣಿಗೆ ಬೀಳುವಂತಿತ್ತು. ದೇವಾಲಯದ ಎದುರು ಎತ್ತರದ ಧ್ವಜಸ್ತಂಭ. ಸುತ್ತಲೂ ಎತ್ತರದ ಪೌಳಿ. ನೆಲಕ್ಕೆ ಕಲ್ಲು ಹಾಸು. ಪೌಳಿಯ ಬಳಿ ಕಟ್ಟೆಯ ಪಾತಿ. ಅದರಲ್ಲಿ ಸೇವಂತಿಗೆ, ಗುಲಾಬಿ, ಮಲ್ಲಿಗೆ, ಜಾಜಿ, ಡೇರೆ ಇತ್ಯಾದಿ ಹತ್ತು ಹಲವು ಬಗೆಯ ಹೂ ಗಿಡ ಬಳ್ಳಿಗಳು. ಬಲ ಬದಿಯಲ್ಲಿ ಎತ್ತರದ ಕೆಂಡ ಸಂಪಿಗೆ ಮರ. ಅದರ ತುಂಬಾ ಹಳದಿ ಹೂವುಗಳು. ಅಂಗಣದ ನಡುವೆ ಕಟ್ಟೆಯ ಮಧ್ಯೆ ತುಳಸೀ ಗಿಡ. ಪೌಳಿಯ ಬಳಿ ಚಪ್ಪಲಿ ಕಳಚಿಟ್ಟು, ಸನಿಹದಲ್ಲಿಯೇ ಇರುವ ಬಾಲ್ದಿಯಲ್ಲಿ ತುಂಬಿದ್ದ ನೀರಿನಿಂದ ಕೈ ಕಾಲು ಮುಖ ತೊಳೆದುಕೊಂಡೆ. ದೇವಾಲಯವನ್ನು ಪ್ರವೇಶಿಸಿದೆ.

ಭವ್ಯವಾದ ಸುಂದರ ಸ್ನಿಗ್ಧ ವಾಸವೀ ಕನ್ನಿಕಾ ದೇವಿಯ ಮೂರ್ತಿ. ಕಡು ಹಸಿರು ಬಣ್ಣದ ಸೀರೆಯನ್ನು ದೇವಿಗೆ ಉಡಿಸಲಾಗಿತ್ತು. ವಿವಿಧ ಬಗೆಯ ಪುಷ್ಪಗಳಿಂದ ದೇವಿಯನ್ನು ಅಲಂಕರಿಸಿದ್ದರು. ಹೂವಿನಿಂದ ಕೋದ ಹಾರಗಳನ್ನು ಮೂರ್ತಿಯ ಸುತ್ತ ಕಾಲಿನವರೆಗೂ ಬರುವಂತೆ ಹಾಕಿದ್ದರು. ದೇವಿಗೆ ಕೈ ಮುಗಿದೆ. ಪೂಜಾರಿಗಳು ನನ್ನ ಗೋತ್ರ ಪ್ರವರ ಕೇಳಿದರು. ಹೇಳಿದೆ. ನನ್ನ ಗೋತ್ರ ಪ್ರವರ ಹೇಳಿ, ನನ್ನ ಹೆಸರನ್ನೂ ಹೇಳಿ ವಾಸವೀ ಕನ್ನಿಕಾ ದೇವಿಗೆ ಅರ್ಚನೆ ಮಾಡಿದರು ಪೂಜಾರಿಗಳು. ಮಂಗಳಾರತಿ ಆಯಿತು. ಪ್ರಸಾದ ತೆಗೆದುಕೊಂಡು ಐವತ್ತು ರೂಪಾಯಿ ಹಾಕಿದೆ.

'ಯಾವ ಊರಿನವರೋ?' ಪೂಜಾರಿಗಳು ಕೇಳಿದರು.

ಹೇಳಿದೆ.

'ಇತ್ತ ಬಂದದ್ದು?'

ಅದನ್ನೂ ಹೇಳಿದೆ.

'ಓಹ್... ಆಂಜನೇಯಪ್ಪ ಮೇಷ್ಟ್ರಾ... ತುಂಬಾ ಒಳ್ಳೆಯ ಮನುಷ್ಯ. ಯಾರಿಗೂ ಯಾವೊತ್ತೂ ಕಾಯಾ ವಾಚಾ ಮನಸಾ ಕೇಡು ಬಗೆಯದ ವ್ಯಕ್ತಿ. ನಮ್ಮ ಈ ತ್ಯಾಮಗೊಂಡ್ಲುವಿನ ಮಹಾನ್ ವ್ಯಕ್ತಿ ಅವರು. ನಿಜಕ್ಕೂ ನಮಗೆ ಪ್ರಾತಃಸ್ಮರಣೀಯರು. ಆದರೇನು ಮಾಡೋಣ ಹೇಳಿ... ಅವರ ತಮ್ಮ ಶರಣಪ್ಪ ಅನ್ನುವಾತ ಆಂಜನೇಯಪ್ಪ ಮೇಷ್ಟ್ರ ಕೊನೇ ಕಾಲದಲ್ಲಿ ಕೊಡಬಾರದ ಕಷ್ಟ ಕೊಟ್ಟ. ಅಂತೆಯೇ ಅವರ ಬೀಗರು, ಅಂದರೆ ಮಗಳ ಮಾವ ಕೂಡಾ... ಆತ ಧನದಾಹಿ. ಹಣಕ್ಕಾಗಿ ಇಲ್ಲದ ಕ್ಯಾತೆ ತೆಗೆದ. ಸೊಸೆಯನ್ನೂ, ಮೊಮ್ಮಗನನ್ನೂ ಮನೆಯಿಂದ ಹೊರ ಹಾಕಿದ. ಪಾಪ ಆ ಹೇಮಾ...